ಎಂ.ವಿ.ಸಿ. ನಂ:1228/**2025, P.W.-1**

**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

ದಿನಾಂಕ:06.02.2026 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ :** ಅರ್ಜಿದಾರರ ಪರ **ವಕೀಲರಿಂದ:**

ನಾನು ಈ ವ್ಯವಹರಣೆಯಲ್ಲಿ ಅರ್ಜಿದಾರನಾಗಿದ್ದು ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಸಾಕ್ಯವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತವೆ.

ನಾನು ಪ್ರ.ವ. ವರದಿ, ಹೇಳಿಕೆ, ಅಪಘಾತ ಸ್ಥಳದ ಮಹಜರ್, ಅಪಘಾತ ಸ್ಥಳದ ಕರಡು ನಕಾಶೆ, ಕಲಂ 133 ಮೋಟಾರು ವಾಹನ ಖಾಯಿದೆಯಡಿ ನೀಡಿದ ನೋಟೀಸ್, 1 ನೇ ಎದುರುದಾರರು ನಿಪಿ-5 ಕ್ಕೆ ನೀಡಿರುವ ಉತ್ತರ, ಐ ಎಮ್ ವಿ ವರದಿ, ಗಾಯದ ಪ್ರಮಾಣಪತ್ರ, ಚಾರ್ಜ್ ಶೀಟ್ ನ ದೃಡೀಕೃತ ನಕಲುಗಳು, ಮೆಡಿಕಲ್ ಬಿಲ್ಲುಗಳು, ಔಷಧ ಚೀಟಿಗಳು, ಡಿಸ್ಚಾರ್ಜ್ ಸಮ್ಮರಿ, disability certificate, ಸಂಬಳ ನೀಡಿದ ಬಗ್ಗೆ ರಶೀದಿ, ನೋಟರೀಕರಿಸಿದ ಡಿ ಎಲ್, ಎಕ್ಸ್ರೇ ಫಿಲಂ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-16 ಎಂದು ಗುರುತಿಸಲಾಯಿತು.

(ನಿಪಿ-15 ದಾಖಲೆಗೆ ಸಂಬಂಧಿಸಿದ ಅಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ಪರಿಶೀಲಿಸಿದ ನಂತರ ನೋಟರೀಕರಿಸಿದ ಪ್ರತಿಯನ್ನು ಪಡೆದು ಅಸಲು ದಾಖಲೆಯನ್ನು ಅರ್ಜಿದಾರರಿಗೆ ವಾಪಾಸ್ಸು ನೀಡಲಾಗಿದೆ.)

(ನಿಪಿ-13 ಮತ್ತು 14 ದಾಖಲೆಗಳನ್ನು ಎದುರುದಾರರ ಪರ ವಕೀಲರ ತಕರಾರಿಗೆ ಒಳಪಟ್ಟು ನಿಶಾನಿಸಲಾಗಿದೆ.)

**ಆದ್ದರಿಂದ ನಾನು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.**

ಪಾಟೀ ಸವಾಲು ಃ 2 ನೇ ಎದುರುದಾರರ ಪರಃ

2 ನೇ ಎದುರುದಾರರ ಪರ ವಕೀಲರು ಸಾಕ್ಷಿಯ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ.

**ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸ.ಇದೆ**

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು